# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 477 |
| ಉತ್ತರಿಸುವ ದಿನಾಂಕ | : | 30.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಏಪ್ರಿಲ್ 1, 2025 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದನ್ನು ಖಚಿತಪಡಿಸಿ ಕೊಳ್ಳಲು ಕಾರ್ಮಿಕ ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ: ವಿಶೇಷವಾಗಿ, ಹೆಚ್ಚಳವನ್ನು ವಿರೋಧಿಸುತ್ತಿರುವ ಎಂ. ಎಸ್. ಎಂ.ಇ ಕ್ಷೇತ್ರಗಳಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; | ಸರ್ಕಾರವು ನಿಗದಿಪಡಿಸಿದ ಕನಿಷ್ಠ ವೇತನವನ್ನು ವಿರೋಧಿಸಿ ನಿಗದಿತ ಕಡಿಮೆ ವೇತನ ನೀಡುತ್ತಿರುವುದಾಗಿ ಎಂ.ಎಸ್.ಎಂ.ಇ ಗಳನ್ನು ಉಲ್ಲೇಖಿಸಿ ಪ್ರತ್ಯೇಕ ದೂರು ಸ್ವೀಕೃತವಾಗಿರುವುದಿಲ್ಲ. ಆದರೆ, ಎಂ.ಎಸ್.ಎಂ.ಇ ಗಳು ಸೇರಿದಂತೆ ಕನಿಷ್ಟ ವೇತನ ಪಾವತಿಸುವ ಸಂಸ್ಥೆಗಳು/ ಕೈಗಾರಿಕೆಗಳ ವಿರುದ್ಧ ದೂರುಗಳು ಸ್ವೀಕೃತವಾಗಿರುತ್ತವೆ. ಅಂತಹ, ದೂರುಗಳು ಸ್ವೀಕೃತವಾದಾಗ ಹಾಗೂ ದೈನಂದಿನ ತಪಾಸಣಾ ಸಂದರ್ಭದಲ್ಲಿ ಕನಿಷ್ಟ ವೇತನ ಪಾವತಿಸದಿರುವುದು ಕಂಡು ಬಂದಾಗ ಕನಿಷ್ಠ ವೇತನ ಕಾಯ್ದೆ, 1948ರಡಿ ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಕ್ಲೇಮ್ ಪ್ರಾಧಿಕಾರಿಗಳು ಸೆಕ್ಷನ್ 20(1) ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ನಿಯಮಾನುಸಾರ ಆದೇಶ ಹೊರಡಿಸುವ ಮೂಲಕ ವ್ಯತ್ಯಾಸದ ಕನಿಷ್ಠ ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗುತ್ತಿದೆ.<br><br>ಈ ಸಂಬಂಧ ಕಳೆದ ಮೂರು ವರ್ಷದ ಅವಧಿಯಲ್ಲಿ ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಒಟ್ಟು 17673 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.913.00 ಕೋಟಿ ಮೊತ್ತದ 4498 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸ ಲಾಗಿರುತ್ತದೆ. ಅದರಲ್ಲಿ 3303 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.670.00 ಕೋಟಿ ಮೊತ್ತದ ಪಾವತಿಗಾಗಿ ಆದೇಶ ಹೊರಡಿಸಲಾಗಿದ್ದು, ಒಟ್ಟು ರೂ.599.434 ಕೋಟಿ ಮೊತ್ತದ ಕ್ಲೇಮ್ ಮೊತ್ತವನ್ನು 4577 ಕಾರ್ಮಿಕರಿಗೆ ವಿತರಿಸಿ ಪರಿಹಾರ ದೊರಕಿಸಿಕೊಡಲಾಗಿದೆ. ಉಳಿದ ಕ್ಲೇಮ್ ಅರ್ಜಿಗಳು ವಿಚಾರಣಾ ಹಂತದಲ್ಲಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿ ಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. |
| ಆ. | ಕಟ್ಟಡ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಬಾಕಿ ಇರುವ ಅರ್ಜಿಗಳು (ಉದಾ: ವೈದ್ಯಕೀಯ ನೆರವು, ಶಿಕ್ಷಣ ವಿದ್ಯಾರ್ಥಿವೇತನ) ಪ್ರಸ್ತುತ ಯಾವ ಹಂತದಲ್ಲಿವೆ: | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸು ತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸೌಲಭ್ಯಗಳು ಘಟನೆ ಆಧಾರಿತವಾಗಿದ್ದು, ನಿರಂತರವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಈ ಸೌಲಭ್ಯಗಳನ್ನು ಸಕಾಲ ವ್ಯಾಪ್ತಿಗೆ ಸೇರ್ಪಡಿಸಲಾಗಿದ್ದು, ನಿಗದಿತ ಕಾಲಮಿತಿಯಲ್ಲಿ ಅರ್ಜಿಗಳು ವಿಲೇವಾರಿಯಾಗುತ್ತವೆ.<br><br>ವಿವಿಧ ಸೌಲಭ್ಯ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಸಲ್ಲಿಸುವ ಕಾರ್ಮಿಕರು ನೈಜ ಕಟ್ಟಡ ಕಾರ್ಮಿಕರೆ ಅಥವಾ ಅಲ್ಲವೇ ಎಂಬುದನ್ನು ಭೌತಿಕವಾಗಿ ಪರಿಶೀಲಿಸುವ ಮತ್ತು ಸೌಲಭ್ಯಗಳಿಗೆ ನಿರ್ದಿಷ್ಟ ಪಡಿಸಿರುವ ಅರ್ಹತೆಗಳನ್ನು ಹೊಂದಿದ್ದಾರೆಯೇ ಎಂಬುದನ್ನು ಪರಿಶೀಲನೆ ಮಾಡುವ |

| | | |
|---|---|---|
| | | ಹಂತದಲ್ಲಿ ಮಾತ್ರ ಅರ್ಜಿಗಳು ಬಾಕಿ ಇದ್ದು ಅವುಗಳನ್ನು ವಿಲೇವಾರಿ ಮಾಡುವ ಪ್ರಕ್ರಿಯೆ ನಿರಂತರವಾಗಿರುತ್ತದೆ. |
| ಇ. | ನಿರ್ಮಾಣ ಮತ್ತು ಉತ್ಪಾದನೆಯಲ್ಲಿ ಕೆಲಸದ ಸ್ಥಳಗಳಲ್ಲಿ ಅಪಘಾತಗಳು ಇತ್ತೀಚಿಗೆ ಹೆಚ್ಚಾಗುತ್ತಿರುವ ಹಿನ್ನಲೆ ಯಲ್ಲಿ ತಪಾಸಣಾ ಕಾರ್ಯ ವಿಧಾನವನ್ನು ಬಲಪಡಿಸಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ? | ಉತ್ಪಾದನೆಯ ಕೆಲಸದ ಸ್ಥಳವು ಕಾರ್ಖಾನೆಗಳ ಕಾಯ್ದೆ 1948 ರ ವ್ಯಾಪ್ತಿಗೆ ಬರುತ್ತದೆ. ಕಾರ್ಮಿಕರ ಸುರಕ್ಷತೆಗಾಗಿ ಕಾರ್ಖಾನೆಗಳ ಕಾಯ್ದೆ 1948 ಮತ್ತು ಭಾರತೀಯ ಬಾಯ್ಲರ್‌ಗಳ ಕಾಯ್ದೆ 1923 ರಡಿ ಕಾಲ ಕಾಲಕ್ಕೆ ತಪಾಸಣೆಗಳನ್ನು ನಡೆಸಿ, ಕಾರ್ಮಿಕರ ಸುರಕ್ಷತೆಯ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ನಿರ್ಮಾಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತು) ಕಾಯ್ದೆ 1996 ರಡಿ ತಪಾಸಣೆಗಳನ್ನು ನಡೆಸಿ, ಕಾರ್ಮಿಕರಿಗೆ ಸುರಕ್ಷತೆ ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಕಾರ್ಮಿಕರು ಸುರಕ್ಷತಾ ನಿಯಮಗಳನ್ನು ಅನುಸರಿಸುವ ಬಗ್ಗೆ ಕಾರ್ಮಿಕರಿಗೆ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. |

**ಸಂಖ್ಯೆ: LD 50 LWA 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನ ಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 477 (416) ಕ್ಕೆ

## ಅನುಬಂಧ-1

| ಕ್ರ. ಸಂ. | ವರ್ಷ | ಕನಿಷ್ಠ ವೇತನ ಕಾಯ್ದೆಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ.ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ.ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ | ಷರಾ |
|---|---|---|---|---|---|---|---|---|---|---|---|
| 1 | 2022-23 | 2640 | 550 | 3190 | 3922 | 123244771 | 783 | 117855574 | 17890327 | 1906 | |
| 2 | 2023-24 | 2407 | 673 | 3080 | 6649 | 417724992 | 1226 | 265651804 | 17594234 | 1242 | |
| 3 | 2024-25 | 1854 | 635 | 2489 | 7102 | 372030657 | 1294 | 286553900 | 24458550 | 1429 | |
| | ಒಟ್ಟು | **2640** | **1858** | **4498** | **17673** | **913000420.00** | **3303** | **670061278.00** | **59943111.00** | **4577** | |

Gopalk
ಆಯುಕ್ತರು
ಕಾರ್ಮಿಕ ಇಲಾಖೆ